ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ.743/2019

**ಸಿ.ಡಬ್ಲ್ಯೂ**-2, **ಪಿ.ಡಬ್ಲ್ಯೂ**-2

ದಿಃ **22-09-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಬಸಪ್ಪ |
| ತಂದೆ/ಗಂಡನ ಹೆಸರು | ಅಣ್ಣಯ್ಯ |
| ವಯಸ್ಸು | 37 ವರ್ಷ |
| ಕೆಲಸ | ಖಾಸಗಿ ಉದ್ಯೋಗ |
| ವಾಸಸ್ಥಳ | ದೊಡ್ಡಬೀಚನಹಳ್ಳಿ ಗ್ರಾಮ, ಹುಣಸೂರು ತಾಲ್ಲೂಕು. |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ಚಾಸಾ-1 ನನ್ನ ತಂದೆ. ಆರೋಪಿತರು ನಮ್ಮ ಗ್ರಾಮದವರು. ದಿಃ16-07-2016 ರಂದು ಸಂಜೆ 7-30 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ನಮ್ಮ ಬೀದಿಯಲ್ಲಿ ನಾನು, ಶೇಖರ ಎಂಬುವವರ ಜೊತೆ ಮಾತನಾಡುತ್ತಾ ನಿಂತಿದ್ದಾಗ, 1 ನೇ ಆರೋಪಿಯು ಅಲ್ಲಿಗೆ ಬಂದು ನಮ್ಮ ಸುದ್ದಿಯನ್ನೇ ಮಾತನಾಡುತ್ತಿದ್ದೀರಾ ಬೊಳಿ ಮಗನೆ, ಸೂಳೆ ಮಗನೆ, ಹೆಂಡತಿ, ಅವ್ವಾ ಎಂದು ಬಾಯಿಗೆ ಬಂದಂಗೆ ಬೈದು, ಕಬ್ಬಿಣದ ರಾಡನ್ನು ತೆಗೆದುಕೊಂಡು ಬಂದು ನನ್ನ ತಲೆಯ ಎಡಭಾಗಕ್ಕೆ ಹೊಡೆದಿರುತ್ತಾರೆ. ಆ ಸಮಯದಲ್ಲಿ ಚಾಸಾ-1 ರವರು ಕೇಳಲು ಬಂದಾಗ ಅವರಿಗೂ ಸಹ ರಾಡಿನಿಂದ ತಲೆಯ ಎಡಭಾಗಕ್ಕೆ ಹೊಡೆದಿರುತ್ತಾನೆ. 2 ನೇ ಆರೋಪಿಯು ಚಾಸಾ-1 ರವರ ಎಡತೊಳಿಗೆ ಹಾಗೂ ಬೆನ್ನಿಗೆ ಕೈಗಳಿಂದ ಹೊಡೆದಿರುತ್ತಾನೆ. 2 ನೇ ಆರೋಪಿಯು 1 ನೇ ಆರೋಪಿಗೆ ಹೊಡೆದು ಹಾಕು, ಸಾಯಿಸು ಎಂದು ಹೇಳಿರುತ್ತಾನೆ. ಆ ಸಮಯದಲ್ಲಿ ಚಾಸಾ-5 ಮತ್ತು 6 ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ಆಂಬೂಲೆನ್ಸ್ ನಲ್ಲಿ ಚಾಸಾ-5 ಮತ್ತು 6 ರವರು ನನ್ನನ್ನು ಹಾಗೂ ಚಾಸಾ-1 ರವರನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಸೇರಿಸಿರುತ್ತಾರೆ. ನಮ್ಮ ಮೇಲೆ ಹಲ್ಲೆ ನಡೆಸಿದ ವ್ಯಕ್ತಿಗಳನ್ನು

ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರು ನನ್ನ ಮೇಲೆ ಹಲ್ಲೆ ನಡೆಸಿದಾಗ ನಾನು ಧರಿಸಿದ್ದ ಬಟ್ಟೆಗಳು ರಕ್ತಕಲೆಯಾಗಿರುತ್ತವೆ. ಆ ದಿನ ಆರೋಪಿತರು ನನ್ನ ಮೇಲೆ ಹಲ್ಲೆಗೆ ಉಪಯೋಗಿಸಿದ ರಾಡನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮು.ಮಾ-1 ನ್ನು ನೋಡಿ ಗುರುತಿಸಿರುತ್ತಾರೆ. ಘಟನೆ ದಿನ ನಾನು ಧರಿಸಿದ ರಕ್ತಕಲೆಯಾಗಿರುವ ಬಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾದ ಮುಂದಿರುವ ಮು.ಮಾ-2 ಮತ್ತು 3 ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲು ಆರೋಪಿತರ ಪರ ಎಂ.ಬಿ ವಕೀಲರಿಂದಃ</u>**

ಚಾಸಾ-1 ನನ್ನ ತಂದೆ. ಚಾಸಾ-3 ನನ್ನ ದಾಯಾದಿ ಎಂದರೆ ಸರಿ. ಚಾಸಾ-4 ನನ್ನ ತಂದೆಯ ಅಕ್ಕನ ಮಗ ಎಂದರೆ ಸರಿ. ಚಾಸಾ-5 ಮತ್ತು 6 ರವರು ನನ್ನ ದಾಯಾದಿಗಳಾಗಬೇಕು. ಚಾಸಾ-3 ದೊಡ್ಡಬೀಚನಹಳ್ಳಿ ಗ್ರಾಮ ಪಂಚಾಯಿತಿಯ ಚುನಾವಣೆಗೆ ಸ್ಪರ್ಧಿಸಿದ್ದರು ಎಂದರೆ ಸರಿ. ಸದರಿಯವರ ವಿರುದ್ಧ ಜವರಯ್ಯನ ಮಗ ಬಸವರಾಜು ಎನ್ನುವವರು ಸ್ಪರ್ಧಿಸಿದ್ದರು ಎಂದರೆ ಸರಿ. ನಾನು ಮತ್ತು ನನ್ನ ತಂದೆ ಚಾಸಾ-3 ರವರ ಪರವಾಗಿ ಚುನಾವಣೆಯಲ್ಲಿ ಬೆಂಬಲಿಸಿದೇವು ಎಂದರೆ ಸರಿಯಲ್ಲ. ಆರೋಪಿತರು ಜವರಯ್ಯನ ಮಗ ಬಸವರಾಜು ರವರಿಗೆ ಬೆಂಬಲಿಸಿದರು ಎಂದರೆ ಗೊತ್ತಿಲ್ಲ. 2 ನೇ ಆರೋಪಿ ಮತ್ತು ಚಾಸಾ-1 ರವರಿಗೆ ತೆಂಗಿನ ಮರ ಕಡಿದಿರುವ ವಿಚಾರವಾಗಿ ಜಗಳವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವಾಗಿ ನಮ್ಮ ತಂದೆ ಚಾಸಾ-1 ರವರ ವಿರುದ್ಧ ದೂರನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದ ದೂರಿನ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. 1 ನೇ ಆರೋಪಿ ನನಗೆ ಅವಾಚ್ಯವಾಗಿ ಬೈದು, ರಾಡಿನಿಂದ ಹೊಡೆದ ವಿಚಾರ ಸುಳ್ಳು ಎಂದರೆ ಸರಿಯಲ್ಲ. 2 ನೇ ಆರೋಪಿ 1 ನೇ ಆರೋಪಿಗೆ ಕುಮ್ಮಕ್ಕು ನೀಡಿ ನನಗೆ ಹೊಡೆಸಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. 2 ನೇ ಆರೋಪಿ ನನಗೆ ಕೈಯಿಂದ ಗುದ್ದಿದರು ಎಂಬ ಅಂಶ ಸುಳ್ಳು ಎಂದರೆ ಸರಿಯಲ್ಲ. ನನಗೆ ಕುಡಿಯುವ ಚಟ ಇರುತ್ತದೆಂದರೆ ಸರಿ. ಸಾಕ್ಷಿಗೆ ತನ್ನ ಭಾವಚಿತ್ರ ತೋರಿಸಲಾಗಿ, ಸದರಿ ಭಾವಚಿತ್ರದಲ್ಲಿರುವುದು ನಾನೇ ಎಂದು ಒಪ್ಪಿಕೊಂಡಿರುತ್ತಾರೆ. ಮತ್ತೊಂದು ಭಾವಚಿತ್ರ ತೋರಿಸಲಾಗಿ ಅದರಲ್ಲಿ ಇರುವುದು ತಾವೇ ಎಂದು

ಒಪ್ಪಿಕೊಂಡಿರುತ್ತಾರೆ. ಸದರಿ ಎರಡು ಭಾವಚಿತ್ರಗಳನ್ನು ಸ.ಸ.ಅಭಿಯೋಜಕರ ತಕರಾರಿಗೊಳಪಟ್ಟು ನಿಡಿ-1 ಮತ್ತು 2 ಎಂದು ಗುರುತಿಸಲಾಯಿತು. ನಾನು ಕುಡಿದು ಜಾಸ್ತಿ ಆಗಿ ನೆಲಕ್ಕೆ ಬಿದ್ದು, ನನ್ನ ತಲೆಯ ಎಡಭಾಗಕ್ಕೆ ಗಾಯವಾಗಿರುತ್ತದೆಂದರೆ ಸರಿಯಲ್ಲ. 2 ನೇ ಆರೋಪಿ 1 ನೇ ಆರೋಪಿಗೆ ಹೊಡೆದು, ಸಾಯಿಸು ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ-2 ಮತ್ತು 3 ನಾನು ಕುಡಿಯುವಾಗ ಧರಿಸಿದ ಬಟ್ಟೆಯಾಗಿದ್ದು, ನೆಲಕ್ಕೆ ಬಿದ್ದು ಆದಂತಹ ರಕ್ತದ ಕಲೆಯೆಂದರೆ ಸರಿಯಲ್ಲ. 1 ನೇ ಆರೋಪಿ ನನಗೆ ಹೊಡೆದಿರುವುದಿಲ್ಲ ಮತ್ತು ಜಗಳ ನಡೆದಿರುವುದಿಲ್ಲ, ನಮ್ಮ ಮತ್ತು ಆರೋಪಿಗಳ ನಡುವೆ ಇರುವ ಹಳೆಯ ವೈಶ್ಯಮ್ಯ ದಿಂದ ನಾನು ಮತ್ತು ಚಾಸಾ-1 ರವರು ಸೇರಿ ಈ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-5 ಮತ್ತು 6 ರವರು ನಮ್ಮ ದಾಯಾದಿಗಳಾಗಿದ್ದು, ಅವರು ಘಟನೆಯಲ್ಲಿಲ್ಲದ್ದಿರೂ, ಅವರು ನಮ್ಮ ಪರವಾಗಿ ಸಾಕ್ಷಿ ನುಡಿಸಲು ನಾನೇ ಹೇಳಿರುತ್ತೇನೆಂದರೆ ಸರಿಯಲ್ಲ. ಘಟನೆ ನಡೆದ ದಿನ ನಾನು ಶೇಖರ ಎಂಬುವವರೊಂದಿಗೆ ಮಾತನಾಡುತ್ತಾ ನಿಂತಿದ್ದೇ ಎಂದು ಹೇಳಿದ್ದು, ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಶೇಖರ ಮಾತನಾಡುತ್ತಿದ್ದಾಗ 1 ನೇ ಆರೋಪಿ ನಮ್ಮನ್ನು ಕೇಳಿರುವುದಿಲ್ಲ ಮತ್ತು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ರಿಂದ 3 ನ್ನು ನಾನೇ ಪೊಲೀಸರಿಗೆ ನೀಡಿರುತ್ತೇನೆಂದರೆ ಸರಿಯಲ್ಲ. ಮು.ಮಾ-1 ನಮ್ಮ ಮನೆಯಲ್ಲೇ ಇತ್ತು ಎಂದರೆ ಸರಿಯಲ್ಲ. ಮು.ಮಾ-1 ನ್ನು ನಾನೇ ಪೊಲೀಸರಿಗೆ ನೀಡಿ ಆರೋಪಿಗಳು ಹೊಡೆದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.